<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಭ್ರಷ್ಟಾಚಾರ ನಿಗ್ರಹ ಪ್ರಕರಣಗಳ ಅಧಿವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (P.C.) 09/2014**

ಪ್ರಾಸಾಃ **12** ಚಾಸಾಃ **38**
ದಿನಾಂಕಃ **08-04-2026**

ಹೆಸರು :: ನಾಗವೇಣಿ ಕೆ.ಎನ್
ಗಂಡನ ಹೆಸರು :: ದೇವರೆಡ್ಡಿ ಎಂ
ವಯಸ್ಸು :: 43 ವರ್ಷ
ಉದ್ಯೋಗ :: ವಾರ್ಡನ್
ವಾಸ ಸ್ಥಳ :: ಸೀಕಲ್ ಗ್ರಾಮ, ಚಿಂತಾಮಣಿ ತಾಲ್ಲೂಕು

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಗಕರಿಂದಃ</u>

1. ಜೂನ್ 2011 ರಿಂದ 2015 ರವರೆಗೆ ನಾನು ಕೋಲಾರ ತಾಲ್ಲೂಕಿನ ಮದನಹಳ್ಳಿ ಕ್ರಾಸ್ ನಲ್ಲಿರುವ ಸರ್ಕಾರಿ ಬಾಲಕಿಯರ ವಿದ್ಯಾರ್ಥಿ ನಿಲಯದ ವಾರ್ಡನ್ ಆಗಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 06.10.2011 ರಿಂದ 22.02.2012 ರವರೆಗೆ ನಾನು ಹೆರಿಗೆ ರಜೆಯ ಮೇಲಿದ್ದೆ. ಆ ಸಮಯದಲ್ಲಿ ಕೋಲಾರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕಳಾಗಿ ಕೆಲಸ ಮಾಡುತ್ತಿದ್ದ 3 ನೇ ಆರೋಪಿ ನಾಗರತ್ನಮ್ಮ ಇವರಿಗೆ ಸದರಿ ವಿದ್ಯಾರ್ಥಿ ನಿಲಯದ ವಾರ್ಡನ್ ಆಗಿ ಹೆಚ್ಚುವರಿ ಕೆಲಸ ವಹಿಸಲಾಗಿತ್ತು.

2. ಫೆಬ್ರವರಿ 2012 ರಲ್ಲಿ 3 ನೇ ಆರೋಪಿಯ ಕಡೆಯಿಂದ ಪುನಃ ನಾನು ಸದರಿ ಹಾಸ್ಟೆಲ್ ನ ಚಾರ್ಜನ್ನು ಪಡೆದೆ. ಆ ಹಾಸ್ಟೆಲ್ ಗೆ ರಾತ್ರಿ ಕಾವಲುಗಾರನಾಗಿ ಖಾಯಂ ನೌಕರನಾಗಿ ವೆಂಕಟಸ್ವಾಮಿ ಇದ್ದರು. ದಿನಗೂಲಿ ನೌಕರರಾಗಿ ಸುಮಂಗಲ, ಮುನಿನಾರಾಯಣಮ್ಮ ಮತ್ತು ಚೌಡಮ್ಮ ರವರು ಇದ್ದರು. ಜೂನ್ 2011 ಕ್ಕೆ ನಾನು ಸದರಿ ಹಾಸ್ಟೆಲ್ ನ ವಾರ್ಡನ್ ಆಗಿ ಬರುವ ಮೊದಲಿನಿಂದ ಸದರಿ ಸುಮಂಗಲ, ಮುನಿನಾರಾಯಣಮ್ಮ ಮತ್ತು ಚೌಡಮ್ಮ ರವರು ಹಾಸ್ಟೆಲ್ ನ ಅಡುಗೆಯವರಾಗಿ ಕೆಲಸ ಮಾಡುತ್ತಿದ್ದರು. ನಾನು ಹೆರಿಗೆ ರಜೆ ಮುಗಿಸಿಕೊಂಡು ಬಂದ ಮೇಲೂ ಸಹಾ ಇದೇ ಮೂರು ಜನರು ದಿನಗೂಲಿ ಅಡುಗೆಯವರಾಗಿ ಕೆಲಸ ಮಾಡುತ್ತಿದ್ದರು.

3. ಖಾಯಂ ನೌಕರನಾದ ವೆಂಕಟಸ್ವಾಮಿ ಇವರ ಹಾಜರಾತಿಯನ್ನು ಪ್ರತಿ ತಿಂಗಳು ದೃಢೀಕರಣ ಮಾಡಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಕಛೇರಿಗೆ ಕಳುಹಿಸುತ್ತಿದ್ದೆ. ದಿನಗೂಲಿ ನೌಕರರಾದ ಸುಮಂಗಲ, ಮುನಿನಾರಾಯಣಮ್ಮ ಮತ್ತು ಚೌಡಮ್ಮ ಇವರ ಹಾಜರಾತಿಯನ್ನೂ ಸಹಾ ಪ್ರತಿ ತಿಂಗಳು ದೃಢೀಕರಣ ಮಾಡಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ ಕಛೇರಿಗೆ ಕಳುಹಿಸುತ್ತಿದ್ದೆ. ಅವರಿಗೆ ವೇತನ ಮಾಡುವ ಅಧಿಕಾರ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರದ್ದು ಇತ್ತು. ಆ ರೀತಿ ಹಾಜರಾತಿ ದೃಢೀಕರಣವನ್ನು ಕಳುಹಿಸಿದ ಮೇಲೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯಾದ 1 ನೇ ಆರೋಪಿಯು ವೇತನದ ಬಿಲ್ಲನ್ನು ತಯಾರು ಮಾಡಿ ಖಜಾನೆಗೆ ಕಳುಹಿಸುತ್ತಿದ್ದರು ಮತ್ತು ನೇರವಾಗಿ ನೌಕರರ ಅಕೌಂಟ್ ಗೆ ಚೆಕ್‌ಗಳ ಮೂಲಕ ವೇತನ ಜಮಾ ಮಾಡಿಸುತ್ತಿದ್ದರು.

4. ದಿನಾಂಕ 19.01.2013 ರಂದು ಲೋಕಾಯುಕ್ತ ಇನ್ಸ್‌ಪೆಕ್ಟರ್ ಆದ ಲೋಕೇಶ್ ರವರು ಲೋಕಾಯುಕ್ತ ಕಛೇರಿಗೆ ಮಹಜರಿಗಾಗಿ ಕರೆದರು. ನಾನು ಮತ್ತು ಇನ್ನೂ 5 ವಾರ್ಡನ್ ಆದ ಭೈರೇಗೌಡ (ಚಾಸಾ 41), ಪ್ರಮೀಳಮ್ಮ (ಚಾಸಾ 39), ಉಮೇಶಪ್ಪ (ಚಾಸಾ 42), ನಾರಾಯಣಸ್ವಾಮಿ (ಚಾಸಾ 40) ಮತ್ತು ವೆಂಕಟೇಶಪ್ಪ ಇವರು ಲೋಕಾಯುಕ್ತ ಕಛೇರಿಗೆ ಹೋದೆವು. ಭೈರೇಗೌಡ ಇವರು ಕೋಲಾರ ನಗರದ ಕೀಲುಕೋಟೆಯ ಸರ್ಕಾರಿ ಬಾಲಕರ ಪಿ.ಯು ವಿದ್ಯಾರ್ಥಿ ನಿಲಯದ ವಾರ್ಡನ್ ಇದ್ದರು, ಪ್ರಮೀಳಮ್ಮ ಇವರು ಕೋಲಾರ ನಗರದ ಪದವಿ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ವಾರ್ಡನ್ ಇದ್ದರು, ಉಮೇಶಪ್ಪ ಇವರು ಕೋಲಾರ ತಾಲ್ಲೂಕು ವೇಮಗಲ್ ನಲ್ಲಿನ ಸರ್ಕಾರಿ ಬಾಲಕರ ವಿದ್ಯಾರ್ಥಿ ನಿಲಯದ ವಾರ್ಡನ್ ಇದ್ದರು, ನಾರಾಯಣಸ್ವಾಮಿ ಇವರು ಕೋಲಾರ ನಗರದ ಅಂಬೇಡ್ಕರ್ ಬಾಲಕರ ವಿದ್ಯಾರ್ಥಿ ನಿಲಯ - 1 ನ ವಾರ್ಡನ್ ಇದ್ದರು. ವೆಂಕಟೇಶಪ್ಪ ಇವರು ಕೋಲಾರ ನಗರದ ಅಂಬೇಡ್ಕರ್ ಬಾಲಕರ ವಿದ್ಯಾರ್ಥಿ ನಿಲಯ - 2 ನ ವಾರ್ಡನ್ ಇದ್ದರು.

5. ಆ ರೀತಿ ಲೋಕಾಯುಕ್ತ ಕಛೇರಿಗೆ ಹೋದಾಗ ನಾನು ವಾರ್ಡನ್ ಆಗಿದ್ದ ಹಾಸ್ಟೆಲ್‌ಗೆ ಸಂಬಂಧಿಸಿದ ದಿನಾಂಕ 06.06.2012 ರ ಬಿಲ್ಲು ಮೊತ್ತ ರೂ.3,14,328/- ಇದನ್ನು ತೋರಿಸಿ ಈ ಬಿಲ್ಲಿನಲ್ಲಿರುವ ನೌಕರರು ನಿಮ್ಮ ಹಾಸ್ಟೆಲ್ ನಲ್ಲಿ ಇದ್ದಾರಾ ಎಂದು ಕೇಳಿದರು. ಅವರು ತೋರಿಸಿದ ದಾಖಲೆಗಳು ಈಗ ತೋರಿಸಿದ ನಿ ಪಿ 234 ರ 2 ದಾಖಲೆಗಳಿವೆ. ಸಾಕ್ಷಿದಾರರು ಗುರುತಿಸಿದ ಸದರಿ 2 ದಾಖಲೆಗಳು ಹಣ ಸಂದಾಯ ರಸೀದಿ ಮತ್ತು ಸಾದಿಲ್ವಾರು ಬಿಲ್ ಎಂದು ಇರುತ್ತವೆ ಮತ್ತು ಅವು ನಿ ಪಿ 234 ರ ಭಾಗ ಇರುತ್ತವೆ. ಅದರಲ್ಲಿ ಹೆಸರಿಸಿದ 4 ಜನರು ನಮ್ಮ

ಹಾಸ್ಟೆಲ್ ನಲ್ಲಿ ಕೆಲಸ ಮಾಡಿರುವುದಿಲ್ಲ. ನಿ ಪಿ 234 ರಲ್ಲಿ ಮೇಲ್ವಿಚಾರಕರು ಎಂದು ಸಹಿ ಮಾಡಿದ ಸಹಿ 3 ನೇ ಆರೋಪಿ ನಾಗರತ್ನ ರವರದ್ದು ಇದೆ. ಸಾಕ್ಷಿದಾರರು ಗುರುತಿಸಿದ ಸದರಿ ಸಹಿಯನ್ನು ನಿ ಪಿ 234(ಬಿ) ಎಂದು ಗುರುತಿಸಲಾಯಿತು. ನಾವು ಬಿಲ್ ಮಾಡಿದರೆ ಅದಕ್ಕೆ ಸೀಲು ಮತ್ತು ಸಹಿ ಹಾಕುತ್ತೇವೆ. ನಿ ಪಿ 234 ಕ್ಕೆ ಸೀಲ್ ಇರುವುದಿಲ್ಲ.

6. 3 ನೇ ಆರೋಪಿಯು ಫೆಬ್ರವರಿ 2011 ರಿಂದ ಮಾರ್ಚ್ 2012 ರವರೆಗೆ ಆ ರೀತಿ ಬಿಲ್ಲನ್ನು ಮಾಡಿದ್ದಾರೆ. ದಿನಾಂಕ 06.06.2012 ರಂದು ಮದನಹಳ್ಳಿ ಕ್ರಾಸ್ ನಲ್ಲಿನ ಹಾಸ್ಟೆಲ್ ನ ವಾರ್ಡನ್ ನಾನಾಗಿದ್ದರೂ ಸಹಾ 3 ನೇ ಆರೋಪಿಯು ಆ ದಿನ ಬಿಲ್ಲನ್ನು ತಯಾರು ಮಾಡಿದ್ದಾರೆ. ನಿ ಪಿ 234 ರ 3 ದಾಖಲೆಗಳಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಕೋಲಾರ ತಾಲ್ಲೂಕು ಎಂಬ ಕಡೆಗಳಲ್ಲಿ ಇರುವ ಸಹಿ 1 ನೇ ಆರೋಪಿಯದ್ದು ಇವೆ. (ಸದರಿ ಸಹಿಗಳ ಬಗ್ಗೆ ತಮ್ಮ ತಕರಾರು ಇಲ್ಲ ಎಂದು 1 ನೇ ಆರೋಪಿ ಪರ ವಕೀಲರು ತಿಳಿಸುತ್ತಾರೆ.)

7. ಲೋಕಾಯುಕ್ತ ಕಛೇರಿಯಲ್ಲಿ ನನ್ನ ಮಾದರಿ ಬರವಣಿಗೆಗಳನ್ನು ಪಡೆದುಕೊಂಡರು. ಆ ದಿನ ಹೋಗಿದ್ದ ಇನ್ನೂ 5 ಜನ ವಾರ್ಡನ್ ಇವರ ಮಾದರಿ ಬರವಣಿಗೆಗಳನ್ನೂ ಸಹಾ ಪಡೆದುಕೊಂಡರು. ಆಗ ಒಂದು ಮಹಜರನ್ನೂ ಸಹಾ ಮಾಡಿದರು ಮತ್ತು ಅದಕ್ಕೆ ನಾನು ಸಹಿ ಮಾಡಿದೆ. ಈಗ ತೋರಿಸಿದ ನಿ ಪಿ 250 ಬರವಣಿಗೆಗಳು ಮತ್ತು ಸಹಿಗಳನ್ನೇ ಲೋಕಾಯುಕ್ತ ಕಛೇರಿಯಲ್ಲಿ ಪಡೆದಿದ್ದಾರೆ. ಈಗ ತೋರಿಸಿದ ನಿ ಪಿ 257 ಸದರಿ ಮಹಜರು ಇದೆ. ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಪಿ 257(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 3 ನೇ ಆರೋಪಿತಳ ಪರ ಶ್ರೀ ಪಿ.ಎನ್.ಕೆ ವಕೀಲರಿಂದಃ</u>

8. ತನಿಖಾಧಿಕಾರಿಯವರು ನಮ್ಮ ಹಾಸ್ಟೆಲ್ ಗೆ ಬಂದಿರಲಿಲ್ಲ. ನಮ್ಮ ಹಾಸ್ಟೆಲ್‌ನಲ್ಲಿ ಆಗ 50 ವಿದ್ಯಾರ್ಥಿಗಳಿದ್ದರು. ಅಡುಗೆಯವರು ಮತ್ತು ಅಡುಗೆ ಸಹಾಯಕರೆಂದು ನಮ್ಮ ಹಾಸ್ಟೆಲ್ ಗೆ 3 ಹುದ್ದೆಗಳು ಮಂಜೂರಾಗಿದ್ದವು. ಹಾಸ್ಟೆಲ್ ನಲ್ಲಿನ ಹಾಜರಾತಿ ಪುಸ್ತಕವನ್ನು ತನಿಖಾಧಿಕಾರಿಯವರು ಪಡೆದಿದ್ದಾರಾ ಎಂದರೆ ಸಾಕ್ಷಿದಾರರು ಹಾಜರಾತಿ ಪುಸ್ತಕವನ್ನು ಪಡೆದಿದ್ದ ಬಗ್ಗೆ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ.

9. ವಾರ್ಡನ್ ಆಗಿದ್ದವರು ಹಣ ಸಂದಾಯ ರಸೀದಿಗೆ ದೃಢೀಕರಣ ಮಾಡಿದರೆ ಮಾತ್ರ ಬಿಲ್ ಪಾಸ್ ಆಗುತ್ತದೆ ಎಂದರೆ ಸಾಕ್ಷಿದಾರರು ಅದನ್ನು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ದೃಢೀಕರಣ ಮಾಡಿದರೆ ಮಾತ್ರ ಬಿಲ್ ಪಾಸ್ ಆಗುತ್ತದೆ ಎನ್ನುತ್ತಾರೆ. ಮುಂದುವರೆದು ಹಣ ಸಂದಾಯ ರಸೀದಿಯೇ ವಾರ್ಡನ್ ರವರು ನೀಡುವ ಹಾಜರಾತಿಯ ದೃಢೀಕರಣ ಇದೆ ಎನ್ನುತ್ತಾರೆ.

10. ನಿ ಪಿ 234 ರ ಹಣ ಸಂದಾಯ ರಸೀದಿ ದಾಖಲೆಯನ್ನು ತೋರಿಸಿ ಅದನ್ನು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರಿಗೆ ಕಳುಹಿಸಿದ ತಾರೀಖು ನಾನು ವಾರ್ಡನ್ ಆಗಿದ್ದೆ ಎಂದರೆ ಸರಿ. ನಿ ಪಿ 234(ಬಿ) ಇದು 3 ನೇ ಆರೋಪಿ ನಾಗರತ್ನ ಇವರ ಸಹಿಯಲ್ಲ ಎಂದರೆ ಸರಿಯಲ್ಲ. ನಿ ಪಿ 234 ರ ಸದರಿ ಹಣ ಸಂದಾಯ ರಸೀದಿ ದಾಖಲೆಯಲ್ಲಿನ ಬರವಣಿಗೆ 3 ನೇ ಆರೋಪಿಯದ್ದಲ್ಲ ಎಂದರೆ ಸಾಕ್ಷಿದಾರರು ಆ ಬಗ್ಗೆ ನನಗೆ ಹೇಳಲು ಬರುವುದಿಲ್ಲ ಎನ್ನುತ್ತಾರೆ.

11. ಲೋಕಾಯುಕ್ತ ಕಛೇರಿಗೆ ನಾನು ಹೋಗಿರಲಿಲ್ಲ ಮತ್ತು ಅಲ್ಲಿ ಯಾವುದೇ ಮಹಜರನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಹಣ ಸಂದಾಯ ರಸೀದಿ 3 ನೇ ಆರೋಪಿ ಕಳುಹಿಸಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ</u>

12. ನಾನು ಲೋಕಾಯುಕ್ತ ಕಛೇರಿಗೆ ಹೋಗಿದ್ದೆ ಮತ್ತು ಆಗ ಇನ್ನೂ 5 ಜನ ವಾರ್ಡರ್ ರವರು ಬಂದಿದ್ದರು ಮತ್ತು ಆಗ ನಿ ಪಿ 257 ರಂತೆ ಮಹಜರು ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 5, 6 ಮತ್ತು 7 ನೇ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಈ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

<u>ನ್ಯಾಯಾಲಯದಿಂದ ವಿಚಾರಣೆಃ</u>

ನಿ ಪಿ **234** ರ ಹಣ ಸಂದಾಯ ರಸೀದಿಯಲ್ಲಿ ಹಣವು ಆಗಲೇ ಸಂದಾಯವಾಗಿರುತ್ತದೆ ಎಂದು ಇದೆಯಲ್ಲಾ ಎಂದರೆ ಸಾಕ್ಷಿದಾರರು ನಾವು ಹಣ ಸಂದಾಯ ರಸೀದಿಯನ್ನು ಕೊಡುವಾಗ ನೌಕರರು ಈ ಅವಧಿಯಲ್ಲಿ ಕೆಲಸ ಮಾಡಿರುತ್ತಾರೆ ಮತ್ತು ಅವರಿಗೆ ಹಣ ಸಂದಾಯ

ಮಾಡಬೇಕಾಗಿರುತ್ತದೆ ಎಂದು ದೃಢೀಕರಣವನ್ನು ನೀಡುತ್ತೇವೆ, ಆಗಲೇ ಸಂದಾಯವಾಗಿರುತ್ತದೆ ಎಂಬಂತೆ ನೀಡುವುದಿಲ್ಲ ಎನ್ನುತ್ತಾರೆ.

(ನ್ಯಾಯಾಲಯದ ವಿಚಾರಣೆ ಮೇರೆಗೆ ತಮ್ಮ ಪಾಟೀ ಸವಾಲು ಇರುವುದಿಲ್ಲ ಎಲ್ಲಾ ಆರೋಪಿ ಪರ ವಕೀಲರು ತಿಳಿಸುತ್ತಾರೆ.)

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ